ಆ) ರಾಜ್ಯದಲ್ಲಿರುವ ಎಲ್ಲಾ ನಗರಸಭೆಗಳು, ಪುರಸಭೆಗಳುಪ, ಪಟ್ಟಣ ಪಂಚಾಯಿತಿಗಳು ಹಾಗೂ ಅಧಿಸೂಚಿತ ಪ್ರದೇಶ ಸಮಿತಿಗಳಲ್ಲಿ ಜಾರಿಗೆ ತರಲು ಉದ್ದೇಶಿಸಿದೆ.

ಇ) ಕರ್ನಾಟಕ ಪುರಸಭೆ ಕಾಯ್ದೆ 1964 ರ ನಿಯಮ 101 ರ ಪ್ರಕಾರ ಕಟ್ಟಡ ಮತ್ತು ನಿವೇಶನದ ಮಾರುಕಟ್ಟೆ ದರದ ಶೇ. 0.3 ಕ್ಕೆ ಕಡಿಮೆಯಾಗದಂತೆ ಮತ್ತು ಶೇ. 0.6 ಕ್ಕೆ ಹೆಚ್ಚಾಗದಂತೆ ವಿಧಿಸಲಾಗುತ್ತಿದೆ. ಹಳೆಯ ಪದ್ಧತಿಯ ಪ್ರಕಾರ ವಾರ್ಷಿಕ ಬಾಡಿಗೆ ಮೌಲ್ಯದ ಶೇ. 15 ರಿಂದ ಶೇ. 20 ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು.

ಈ) ಹಳೆಯ ಪದ್ಧತಿಯಲ್ಲಿ ಹೆಚ್ಚಿನ ನ್ಯೂನ್ಯತೆಗಳು ಇದ್ದುದರಿಂದ ಕೈಬಿಡಲಾಗಿದೆ.

ನಗರಸಭೆಗಳಿಗೆ ಹೆಚ್ಚಿನ ನೆರವು ಒದಗಿಸುವುದು

1059 (1264) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಗರಸಭೆಗಳು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವುದರಿಂದ ಇವುಗಳಿಗೆ ಹೆಚ್ಚಿನ ಆರ್ಥಿಕ ನೆರವನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಬೆಳಾವಿ ಜಿಲ್ಲೆ ಬೈಲಹೊಂಗಲ ಹಾಗೂ ಸವದತ್ತಿ ಪುರಸಬೆಗಳು ಆರ್ಥಿಕ ಮುಗ್ಗಟ್ಟಿನಿಂದ ಇದ್ದು, ಇಲ್ಲಿ ಹೆಚ್ಚಿನ ಅಭಿವೃದ್ಧಿ ಕೆಲಸಗಳನ್ನು ಮಾಡಲು ಆಗದೇ ಇರುವುದರಿಂದ ಇಲ್ಲಿನ ರಸ್ತೆಗಳು ಹಾಗೂ ಕುಡಿಯುವ ನೀರಿನ ತೊಂದರೆಯನ್ನು ಸರಿಪಡಿಸಲು ವಿಶೇಷವಾದ ನೆರವನ್ನು ಒದಗಿಸಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ರಾಜ್ಯದ ನಗರಸಭೆಗಳಿಗೆ ರಾಜ್ಯ ಹಣಕಾಸಿನ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ರಾಜ್ಯದ ಸಂಪನ್ಮೂಲದ ಶೇಕಡ : 5 ಭಾಗವನ್ನು ಕೊಡಲಾಗುತ್ತಿದೆ.

ಆ) ಪರಿಶೀಲಿಸಲಾಗುವುದು.

ಬೈಲಹೊಂಗಲ ಘಟಕದಲ್ಲಿ ಹೊಸ ಬಸ್ಸುಗಳನ್ನು ಒದಗಿಸುವುದು

1060 (1266) - ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈ ತೋರಿದಲ್ಲಿ ನಿಲ್ಲುವ ವಾಹನಗಳಿಗೆ ಕೇವಲ ಅತೀ ಹಳೆಯ ಹಾಗೂ ನಿಷ್ಕ್ರಿಯವಾದ ಬಸ್ಸುಗಳನ್ನು ಒದಗಿಸುತ್ತಿರುವ ಸಂಗತಿ ನಿಜವೇ;

ಆ) ಹಾಗಿದ್ದಲ್ಲಿ ಈ ಸಾರಿಗೆಗಳಿಗೂ ಸಹ ಹೊಸ ಬಸ್ಸುಗಳನ್ನು ಕೊಡಲುಕ್ರಮ ಕೈಗೊಳ್ಳಲಾಗುವುದೇ;

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಘಟಕದಲ್ಲಿ ಎಷ್ಟು ಕೈ ತೋರಿದಲ್ಲಿ ನಿಲ್ಲುವ ವಾಹನಗಳಿವೆ;

ಈ) ಈ ವಾಹನಗಳಲ್ಲಿ ಎಷ್ಟು ವಾಹನಗಳು ಹೊಸದಾಗಿ ಇರುತ್ತವೆ; ಹಾಗೂ ಎಷ್ಟು ವಾಹನಗಳು ಹಳೆಯ ವಾಹನಗಳಾಗಿರುತ್ತದೆ.

ಉ) ಬೈಲಹೊಂಗಲ ಡಿಪೋದಿಂದ ಕೇವಲ ಹಳೆ ಬಸ್ಸುಗಳನ್ನು ಬಿಡಲಾಗುತ್ತಿರುವ ಸಂಗತಿ ನಿಜವೇ?